ಗಳನ್ನು ಆದರೂ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತಾ ಇಲ್ಲ. ಮುಂದಿನ ಒಂದು ವರ್ಷದೊಳಗೆ ಅಂದರೆ, 73ರ ಒಳಗೆ ಈ ಬಸ್ ಷೆಲ್ಟರುಗಳನ್ನು ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೀರಾ ?

Sri N. CHIKKEGOWDA.—This will be considered as early as practicable.

ಶ್ರೀ ಶರಣಪ್ಪ.—ತಾವು ಉತ್ತರದಲ್ಲಿ ಮುಂದಿನ ಯೋಜನೆಗಳಲ್ಲಿ ಎನ್ನುವ ಶಬ್ದವನ್ನು ಉಪಯೋಗಿಸಿದ್ದೀರಿ. ರಾಜ್ಯದಲ್ಲಿ ಅನೇಕ ಸ್ಥಳಗಳಲ್ಲಿ ಬಸ್ ನಿರ್ಮಾಣಗಳನ್ನು ಕಟ್ಟುವುದಕ್ಕೆ ಮುಂಜೂರಾತಿಯಾಗಿದ್ದರೂ ಸಹ ಆ ಸ್ಥಳಗಳಲ್ಲಿ ಬಸ್ ನಿರ್ಮಾಣಗಳನ್ನು ಕಟ್ಟದೆ ಹಾಗೆ ನಿಂತಿವೆ. ಈ ತಮ್ಮ ಯೋಜನೆಯ ಪಟ್ಟಿಯಲ್ಲಿ ಯಾವ ಯಾವ ಗ್ರಾಮಗಳಿಗೆ ಈ ನಿರ್ಮಾಣಗಳನ್ನು ಕೊಡಬೇಕೆಂದು ಇದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಾಜ್ಯಸರ್ಕಾರದ ಸಾರಿಗೆ ಸಂಸ್ಥೆಯ ಬಸ್ ನಿರ್ಮಾಣಗಳನ್ನು ಕಟ್ಟುವುದಕ್ಕೆ ಯೋಚನೆ ಮಾಡುತ್ತಿದೆ, ಹಣ ಬಂದಾಗ ಕಟ್ಟುತ್ತೇವೆಂದು ಹೇಳಿದ್ದಾರೆ. ಈಗ ಅಲ್ಲಿನ ಹಣಕಾಸಿನ ಪರಿಸ್ಥಿತಿ ಉತ್ತಮವಾಗಬೇಕಾದರೆ ಈ ಇರಾಖೆಯಲ್ಲಿರತಕ್ಕ ದುರಾಡಳಿತ ಹೋಗಬೇಕು. ಅಧಿಕಾರಿಗಳ ಹೃದಯ ಪರಿವರ್ತನೆ ಆಗಬೇಕು ಮತ್ತು ಈ ಇರಾಖೆಯನ್ನು ವಹಿಸಿರತಕ್ಕ ಮಂತ್ರಿಗಳಲ್ಲಿ ಸತ್ಯಸಂಧತೆ ಇರಬೇಕು. ಇವೆಲ್ಲವನ್ನೂ ಯಾವಾಗ ಸರ್ಕಾರ ಸ್ವಚ್ಛ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ, ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

Cauvery River Water to Bangalore City

100. Sri T. R. SHAMANNA (Fort).—

Will the Minister for Municipal Administration be pleased to state :—

(*a*) the progress made by the Bangalore Water Supply and Sewerage Board, to get water from Cauvery River to Bangalore City ;

(*b*) when the work is expected to be completed ;

(*c*) the steps taken to lay sewerage mains to the areas where underground sewerage is not provided ?

Sri B. BASAVALINGAPPA (Minister for Municipal Administration).—

(*a*) Out of 78.5 K. M. length of transmission main. 28 K. M. length of pipe has been fabricated and about 22 K. M. length has been laid in trenches, upto March end. The various civil works connected with the project, such as formation of service road, cross drainage works, pipe line supports are also in progress. Construction work on pump houses and pure water tanks and water treatment units has already been taken up and is in progress as per schedule.

(*b*) Before end of December 1973.

(SRI B. BASAVALINGAPPA)

(c) The Board has taken up as an emergent measure to provide Underground Drainage facilities in Thyagarajanagar and a few areas in villages added to the Corporation.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರಕ್ಕೆ ಕಾವೇರಿ ನೀರು ತರುವುದಕ್ಕೆ ಹಾಕಿಕೊಂಡಿದ್ದ ಯೋಜನೆ 1964 ರಿಂದ 1970 ರವರೆಗೂ ಕೂಡ ನಿದ್ದೆ ಮಾಡುತ್ತಾ ಇದ್ದು ಈಗ ಅದರ ಕೆಲಸ ಆರಂಭವಾಗಿದೆ. ಮೂರು ಜನ ನಗರಾಡಳಿತ ಮಂತ್ರಿಗಳು ಬಂದು ಹೋದರು. ಈಗ ಬಂದಿರತಕ್ಕ ನಗರಾಡಳಿತ ಮಂತ್ರಿಗಳ ಕಾಲದಲ್ಲಿಯಾದರೂ ಈ ಕೆಲಸ ಪೂರ್ತಿಯಾಗಿ ಬೆಂಗಳೂರಿಗೆ ಕಾವೇರಿ ನೀರಿನ ಸೌಲಭ್ಯ ಅವರು ಹೇಳಿದ ಕಾಲಕ್ಕೆ ಒದಗುತ್ತದೆಯೇ ಎನ್ನುವ ವಿವರ ಕೊಡುತ್ತೀರಾ? ಮತ್ತು ಇಲ್ಲಿಯವರೆಗೂ ಯಾವ ಕೆಲಸ ನಡೆದಿದೆ ಎನ್ನುವ ಬಗ್ಗೆಯೂ ವಿವರವನ್ನು ಈ ಸಭೆಗೆ ಕೊಡುತ್ತೀರಾ?

† ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ರನ್ನಿಂಗ್ ಹೈಪ್‌ಲೈನ್ಸ್ 78.5 ಕಿಲೋಮೀಟರುಗಳು ಇದೆ. ಈಗಾಗಲೇ 33.75 ಕಿಲೋಮೀಟರುಗಳಷ್ಟು ದೂರವನ್ನು ನಾವು ಪೂರೈಸಿದ್ದೇವೆ. ಗೊತ್ತುಪಡಿಸಿದ ಕಾಲಕ್ಕಿಂತ ಮುಂಚಿತವಾಗಿಯೇ ಕೆಲಸವನ್ನು ಮಾಡುತ್ತಿದ್ದೇವೆ. 43 ಕಿಲೋಮೀಟರುಗಳಷ್ಟು ಫ್ಯಾಬ್ರಿಕೇಟೆಡ್ ಹೈಪ್ಸ್ ನಮ್ಮ ಹತ್ತಿರ ಸ್ಟಾಕ್ ಇದೆ. ಆದ್ದರಿಂದ 1973 ಡಿಸೆಂಬರ್ ಒಳಗೆ ಈ ಕಾಮಗಾರಿಯನ್ನು ಮುಗಿಸುತ್ತೇವೆ. ಅದಕ್ಕಿಂತ ಮುಂಚಿತವಾಗಿಯೇ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬಹಳ ಆತುರವಾಗಿ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ 30 ಕೋಟಿ ರೂಪಾಯಿಗಳು ಬೇಕಾಗಿವೆ. ಈ ವರ್ಷದ ಬಜೆಟ್ಟಿನಲ್ಲಿ ಸರ್ಕಾರದವರು ಒದಗಿಸಿರತಕ್ಕಂಥ ಹಣ ಸುಮಾರು 11 ಕೋಟಿ ರೂಪಾಯಿಗಳು. ಮಿಕ್ಕ ಹಣದ ವ್ಯವಸ್ಥೆಯನ್ನು ಯಾವ ರೀತಿ ಮಾಡಿಕೊಂಡಿದ್ದೀರಾ? ಹಣದ ವ್ಯವಸ್ಥೆ ಇಲ್ಲದೆ ಇದ್ದರೂ ಕೆಲಸ ನಿಲ್ಲುವುದಿಲ್ಲ ಎನ್ನುವ ಭರವಸೆ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಬಿ. ಬಸವಲಿಂಗಪ್ಪ.—ಹಣಕ್ಕಾಗಿ ಎಲ್. ಐ. ಸಿ. ಯಿಂದ ಸಹಾಯ ತೆಗೆದುಕೊಂಡಿದ್ದೇವೆ. ಮತ್ತು ಡಿಬೆಂಚರ್ ಲೋನ್ಸ್ ಕೂಡ ಫ್ಲೋಟ್ ಮಾಡುತ್ತಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ಕೊಳಚೆ ಪ್ರದೇಶಗಳಲ್ಲಿ, ಬ್ಯಾಕ್‌ವರ್ಡ್ ಪ್ರದೇಶಗಳಲ್ಲಿ ಮತ್ತು ಅಂಡರ್ ಡೆವಲಪ್ಡ್ ಏರಿಯಾಗಳಲ್ಲಿ ಸೂಯರೇಜ್ ನೀರು ಸರಿಯಾಗಿ ಹೋಗದೆ ಇರುವುದರಿಂದ ಸೊಳ್ಳೆಗಳ ಕಾಟ ಜಾಸ್ತಿಯಾಗಿದೆ. ಆದ್ದರಿಂದ ಈ ಅನ್ ಡೆವಲಪ್ಡ್ ಏರಿಯಾದಲ್ಲೂ ಅಂಡರ್ ಗ್ರೌಂಡ್ ಸೂಯರೇಜ್ ಹಾಕುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಎಲ್ಲಾ ಮಾನ್ಯಸದಸ್ಯರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಬಹಳ ತ್ವರಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಸೂಯರೇಜ್ ಡಿಸ್ಪೋಸಲ್ಸ್‌ಗೆ ನಾವು ಟೆಂಡರ್ ಕರೆದಿದ್ದೇವೆ. ಕೊಳೆ ನೀರು ಎಲ್ಲೆಲ್ಲಿ ನಿಂತುಕೊಳ್ಳುತ್ತದೋ ಅಂಥ ಪ್ರದೇಶವನ್ನು ಸ್ಪೆಷ್ಯಲ್ ಆಗಿಟ್ಟರೆ, ಈ ಸೊಳ್ಳೆಗಳ ಕಾಟ ಕಡಿಮೆ ಆದೀತು ಎಂದು ನನಗನ್ನಿಸುತ್ತದೆ.

Sri T. R. SHAMANNA.—Many areas in the city are not connected with sewerage. Will the Government give direction to the Water Supply and Sewerage Board to lay up the sewerage lines in all the areas where the dirty water is accumulated?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಶಾಮಣ್ಣನವರಿಗೂ ಗೊತ್ತಿರುವಂತೆ ನಾವು ಎಲ್ಲ ಭಾಗಗಳನ್ನೂ ಸ್ಪಷ್ಟತೆಯಿಂದ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ಸೊಳ್ಳೆಗಳ ನಿರ್ಮೂಲನಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈಗ ಸೊಳ್ಳೆಗಳ ಕಾಟ ಕಡಿಮೆಯಾಗಿರುವಂತೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಸೊಳ್ಳೆಗಳಿಗೆ ಕುಟುಂಬ ಯೋಜನೆಯನ್ನು ಅಳವಡಿಸುವು ದಕ್ಕಾಗುವುದಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಅಧಿಕಾರಕ್ಕೆ ಬಂದಮೇಲೆ ಅದನ್ನು ಮಾಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಕಾವೇರಿ ನದಿಯಿಂದ ರಾಜಧಾನಿಗೆ ನೀರು ತರುವ ಬಗ್ಗೆ ಮಾನ್ಯ ಮಂತ್ರಿಗಳು ಎಷ್ಟು ಆಸಕ್ತರಾಗಿದ್ದಾರೋ ಅಷ್ಟೇ ಒಂದು ತೀವ್ರವಾದಂಥ ಆಸಕ್ತಿ ಅಧಿ ಕಾರಿಗಳಿಗೂ ಸಹ ಇದೆಯೇ ? ಮತ್ತು ಹಿಂಪೆ ಈ ಪೈಪ್‌ಗಳ ಬಗ್ಗೆ ಏನು ಒಂದು ಗಲಾಟೆ ಉಂಟಾಗಿತ್ತು, ಅದರ ಒಂದು ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧಿಕಾರಿಗಳು ಕೆಲಸಮಾಡದಿದ್ದರೆ ಯಾವ ರೀತಿ ಕೆಲಸವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ.—ಕಾವೇರಿ ನೀರಿನ ಪೂರೈಕೆಯಾಗುವುದು ಇನ್ನೂ ಸ್ವಲ್ಪ ಕಾಲ ತಡವಾಗುವುದರಿಂದ, ಟ್ರಸ್ಟ್‌ಬೋರ್ಡಿನವರು ಸ್ವಾಧೀನಪಡಿಸಿಕೊಂಡ ಪ್ರದೇಶಗಳಿಗೆ ಮತ್ತು ಕಾರ್ಪೊರೇಷನ್‌ಗೆ ಸೇರಿಸಿಕೊಂಡ 34 ಹಳ್ಳಿಗಳಿಗೆ ತುರ್ತಾಗಿ ನೀರನ್ನು ಒದಗಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೋದ ಅಸೆಂಬ್ಲಿಯಲ್ಲಿಯೇ ಹೇಳಿದ್ದೆ, ಏನೆಂದರೆ, ಬಹಳ ತೀವ್ರತೆಯಿಂದ ಸಂಬಂಧಪಟ್ಟ ಎಲ್ಲ ಹಳ್ಳಿಗಳಿಗೂ ನೀರನ್ನು ಸರಬರಾಜು ಮಾಡುವುದಕ್ಕೆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು. ಈಗ ಅದರಂತೆ ಮಾಡುತ್ತಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಸೊಳ್ಳೆಗಳ ನಿರ್ಮೂಲನಕ್ಕಾಗಿ 10 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಲಾಗುವುದೆಂದು ಹೇಳಿದಿರಿ, ಅದನ್ನು ಯಾವ ಯಾವ ರೀತಿ ಖರ್ಚು ಮಾಡುತ್ತೀರಿ ; ಮತ್ತು ಬೆಂಗಳೂರಿನ ಸುತ್ತಮುತ್ತ ಖಾಸಗೀ ಜಮೀನುಗಳಲ್ಲಿ ಮನೆ ಕಟ್ಟಿ ಕೊಳ್ಳುವವರಿಗೆ ನೋಟೀಸ್ ಕೊಟ್ಟು ತಮ್ಮ ಸ್ಥಳಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ತಿಳಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಈ ಪ್ರಶ್ನೆ ಮೂಲ ಪ್ರಶ್ನೆಗೆ ಸಂಬಂಧಪಟ್ಟಿಲ್ಲವಾದರೂ ಉತ್ತರ ಕೊಡುತ್ತೇನೆ. ಕಳೆದ ಹತ್ತಾರು ವರ್ಷಗಳಿಂದ ಬೆಂಗಳೂರು ನಗರದ ಸುತ್ತಮುತ್ತ ಮೂರು ರೀತಿಯಲ್ಲಿ ಮನೆಗಳನ್ನು ಕಟ್ಟುತ್ತಿದ್ದಾರೆ. ಇನ್ನು ಮುಂದೆ ಖಾಸಗೀ ಜಾಗಗಳಲ್ಲಿ ಮನೆ ಗಳನ್ನು ಕಟ್ಟುವವರಿಗೆ ವ್ಯವಸ್ಥಿತ ರೂಪದಲ್ಲಿ ಕಟ್ಟಬೇಕೆಂದು ತಿಳಿವಳಿಕೆ ಕೊಡುವ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಶೀಘ್ರದಲ್ಲಿಯೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಂತಹ ಪ್ರದೇಶಗಳಲ್ಲಿಯೂ ಸೊಳ್ಳೆಗಳು ಉತ್ಪತ್ತಿಯಾದರೆ ಅದನ್ನು ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾವೇರಿ ನದಿಯಿಂದ ತರತಕ್ಕಂಥ ನೀರನ್ನು ಎಷ್ಟು ಜನ ಸಂಖ್ಯೆಗೆ ಒದಗಿಸುವುದಕ್ಕೆ ಸಾಧ್ಯವಿದೆ ಮತ್ತು ಈಗಿನ ಬೆಂಗಳೂರು ಜನಸಂಖ್ಯೆ ಎಷ್ಟಿದೆ ಎಂಬ ಅಂದಾಜು ಏನಾದರೂ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈಗ ನಾವು ಏನು ಒಂದು ಪೈಪ್‌ಲೈನ್ ಹಾಕುತ್ತಿದ್ದೇವೆ ಆ ಒಂದು ಪೈಪ್‌ಲೈನ್‌ನಿಂದ ಮುಂದಿನ 15—20 ವರ್ಷಗಳವರೆಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯ ವಾಗಬಹುದೆಂದು ಕಾಣುತ್ತದೆ. ಮತ್ತು ಈಗ ಪೈಪ್‌ಲೈನ್ ಹಾಕುತ್ತಿರುವ ಜಾಗದಲ್ಲಿಯೇ ಮುಂದೆ ಇನ್ನೊಂದು ಪೈಪ್‌ಲೈನ್ ಹಾಕುವುದಕ್ಕೂ ಸಹ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸೊಳ್ಳೆಗಳ ಕಾಟದಿಂದ ಅನೇಕಾಲು ರೋಗ ಹರಡುತ್ತಿದೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. ಈ ಸುಂದರ ನಗರದಲ್ಲಿ ಆ ರೋಗ ಬರದಿರುವಂತೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರಿನಲ್ಲಿ ಆ ರೋಗ ಬರುವುದಿಲ್ಲ.

MADAM SPEAKER.—Questions are over.